## ಕರ್ನಾಟಕ ವಿಧಾನ ಪರಿಷತ್ತು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 844

ಉತ್ತರಿಸಬೇಕಾದ ದಿನಾಂಕ : 19.08.2025

ಉತ್ತರಿಸಬೇಕಾದ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಮಂಡ್ಯ ಜಿಲ್ಲೆ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., (ಮನ್‌ಮುಲ್) ವ್ಯಾಪ್ತಿಯಲ್ಲಿರುವ ಸಂಘಗಳು ಉತ್ಪಾದಕರ ಸಂಖ್ಯೆ ಎಷ್ಟು; ಹಾಗೂ ಪ್ರತಿ ದಿನ ತಾಲ್ಲೂಕಿನಿಂದ ಎಷ್ಟು ಪ್ರಮಾಣದ ಹಾಲು ಪೂರೈಕೆ ಆಗುತ್ತದೆ; (ತಾಲ್ಲೂಕುವಾರು ಮಾಹಿತಿ ನೀಡುವುದು) | ಮಂಡ್ಯ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ 1307 ಹಾಲು ಉತ್ಪಾದಕರ ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 1,01,147 ಸಕ್ರಿಯ ಸದಸ್ಯರುಗಳ ಮೂಲಕ ದಿನವಹಿ 12,60,613 ಕೆ.ಜಿ.ಗಳಷ್ಟು ಹಾಲನ್ನು ಶೇಖರಣೆ ಮಾಡಲಾಗುತ್ತಿದ್ದು, ತಾಲ್ಲೂಕುವಾರು ವಿವರ ಈ ಕೆಳಕಂಡಂತಿರುತ್ತದೆ. (see table below) |

| ಕ್ರ. ಸಂ | ತಾಲ್ಲೂಕು | ಕಾರ್ಯಾಚರಣೆಯಲ್ಲಿರುವ ಸಂಘಗಳ ಸಂಖ್ಯೆ | ಹಾಲು ಪೂರೈಸುತ್ತಿರುವ ಸಕ್ರಿಯ ಸದಸ್ಯರ ಸಂಖ್ಯೆ | ದಿನವಹಿ ಹಾಲಿನ ಶೇಖರಣೆ (ಕೆ.ಜಿ.ಗಳಲ್ಲಿ) |
|---|---|---|---|---|
| 1 | ಮಂಡ್ಯ | 221 | 18283 | 190125 |
| 2 | ಮದ್ದೂರು | 203 | 17639 | 197691 |
| 3 | ಮಳವಳ್ಳಿ | 151 | 12467 | 147632 |
| 4 | ಶ್ರೀ ರಂಗ ಪಟ್ಟಣ | 71 | 7468 | 80883 |
| 5 | ಪಾಂಡವಪುರ | 148 | 12100 | 145429 |
| 6 | ಕೆ.ಆರ್.ಪೇಟೆ | 251 | 20455 | 301296 |
| 7 | ನಾಗಮಂಗಲ | 262 | 12735 | 197556 |
| | **ಒಟ್ಟು** | **1,307** | **1,01,147** | **12,60,613** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ | "ಮನ್‌ಮುಲ್" ನಂದಿನಿ ಹಾಲು ಮತ್ತು ನಂದಿನಿ ತುಪ್ಪವನ್ನು ಯಾವ ಯಾವ ರಾಜ್ಯಗಳಿಗೆ ಪೂರೈಸಲಾಗುತ್ತಿದೆ; | ▪ ಮನ್‌ಮುಲ್ ನಂದಿನಿ ಯು.ಹೆಚ್.ಟಿ. ಹಾಲನ್ನು ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳಿಗೆ Andra pradesh Dairy Development Co-Operative Federation Ltd., (APDDCF) School Milk Programme ಗೆ ಪೂರೈಸಲಾಗುತ್ತಿದೆ. ಮುಂದುವರೆದು ದೆಹಲಿ ಮಾರುಕಟ್ಟೆಗೆ ಸ್ಯಾಚೆಟ್ ಹಾಲನ್ನು ಕೋ-ಪ್ಯಾಕಿಂಗ್ ಮಾಡಿಸಿ ಮಾರಾಟ ಮಾಡಲಾಗುತ್ತಿದೆ.<br>▪ ನಂದಿನಿ ತುಪ್ಪವನ್ನು ಆಂಧ್ರಪ್ರದೇಶದ ತಿರುಪತಿ ತಿರುಮಲ ದೇವಸ್ಥಾನಕ್ಕೆ ಪೂರೈಸಲಾಗುತ್ತಿದೆ. |
| ಇ | ಈ ರಾಜ್ಯಗಳಿಗೆ ಯಾವಾಗಿನಿಂದ ಹಾಲು ಪೂರೈಸಲಾಗುತ್ತಿದೆ ಆರಂಭದಲ್ಲಿ ಪ್ರತಿ ದಿನ ಪೂರೈಸುತ್ತಿದ್ದ ಹಾಲಿನ ಪ್ರಮಾಣ ಎಷ್ಟು; ಈಗ ಪ್ರತಿ ದಿನಕ್ಕೆ ಪೂರೈಕೆ ಮಾಡುತ್ತಿರುವ ಹಾಲಿನ ಪ್ರಮಾಣ ಎಷ್ಟು; (ವಿವರ ನೀಡುವುದು) | ➢ ಮಂಡ್ಯ ಹಾಲು ಒಕ್ಕೂಟದಿಂದ ಪ್ರಾರಂಭದಲ್ಲಿ ದಿ:22.06.2020 ರಿಂದ ಪ್ರತಿನಿತ್ಯ 5000 ಲೀಟರ್ ನಷ್ಟು ಯು.ಹೆಚ್.ಟಿ. ವಿಜಯ ವಜ್ರ ಹಾಲನ್ನು APDDCF ಗೆ ಪೂರೈಸಲಾಗುತ್ತಿತ್ತು,<br>➢ ಪ್ರಸ್ತುತ ಪ್ರತಿನಿತ್ಯ 17245 ಲೀಟರ್ ನಷ್ಟು ಯು.ಹೆಚ್.ಟಿ. ವಿಜಯ ವಜ್ರ ಹಾಲನ್ನು APDDCF ಗೆ ಪೂರೈಸಲಾಗುತ್ತಿದೆ.<br>➢ ಕರ್ನಾಟಕ ಹಾಲು ಮಹಾಮಂಡಳ ನಿರ್ದೇಶನದಂತೆ ನವೆಂಬರ್-2024 ರ ಮಾಹೆಯಿಂದ ದೆಹಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ.<br>➢ ಆರಂಭದಲ್ಲಿ ಪ್ರತಿನಿತ್ಯ ಸರಾಸರಿ 6775 ಕೆ.ಜಿ. ನಂದಿನಿ ಹಾಲನ್ನು ದೆಹಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ್ದು, ಪ್ರಸ್ತುತ ಸರಾಸರಿ 45,000 ಕೆ.ಜಿ. ನಂದಿನಿ ಹಾಲನ್ನು ದೆಹಲಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲಾಗುತ್ತಿದೆ. |

| | | |
|---|---|---|
| ಈ | ಮಂಡ್ಯ ಸೇರಿದಂತೆ ರಾಜ್ಯದ ಎಲ್ಲಾ ವಿವಿಧ ಹಾಲು ಒಕ್ಕೂಟಗಳಿಂದ ತಿರುಮಲಕ್ಕೆ ಪೂರೈಕೆ ಆಗುತ್ತಿರುವ ನಂದಿನಿ ತುಪ್ಪದ ಪ್ರಮಾಣ ಎಷ್ಟು; (ಹಾಲು ಒಕ್ಕೂಟವಾರು ಮಾಹಿತಿ ನೀಡುವುದು) ಹಾಗೂ ಎಷ್ಟು ಅವಧಿಗೆ ಒಪ್ಪಂದ ಮಾಡಿಕೊಳ್ಳ ಲಾಗಿದೆ; | ಕರ್ನಾಟಕ ಹಾಲು ಮಹಾಮಂಡಳ, ಮಂಡ್ಯ ಹಾಗೂ ತುಮಕೂರು ಹಾಲು ಒಕ್ಕೂಟದಿಂದ ತಿರುಮಲ ತಿರುಪತಿ ದೇವಸ್ಥಾನಕ್ಕೆ ಸರಬರಾಜಾಗುತ್ತಿರುವ ನಂದಿನಿ ತುಪ್ಪದ ವಿವರ ಈ ಕೆಳಕಂಡಂತಿರುತ್ತದೆ.<br><br>ಕರ್ನಾಟಕ ಹಾಲು ಮಹಾಮಂಡಳಿ 3707.995 ಮೆ.ಟನ್<br>ಮಂಡ್ಯ ಹಾಲು ಒಕ್ಕೂಟ 146.135 ಮೆ.ಟನ್<br>ತುಮಕೂರು ಹಾಲು ಒಕ್ಕೂಟ 256.035 ಮೆ.ಟನ್<br>.................................<br>ಒಟ್ಟು 4110.165 ಮೆ.ಟನ್<br><br>ಕರ್ನಾಟಕ ಹಾಲು ಮಹಾಮಂಡಳವು 2024ರ ಆಗಸ್ಟ್ ಮಾಹೆಯಿಂದ ತಿರುಮಲ ತಿರುಪತಿಗೆ ತುಪ್ಪ ಸರಬರಾಜು ಮಾಡಲು ಪ್ರಾರಂಭಿಸಿದ್ದು, ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ನಲ್ಲಿ ಭಾಗವಹಿಸಿ, ಆದೇಶವನ್ನು ಪಡೆದು, ಪ್ರತಿ ಆರು ತಿಂಗಳ ಅವಧಿಗೆ ಟೆಂಡರ್ ಒಪ್ಪಂದದಂತೆ ತುಪ್ಪವನ್ನು ಸರಬರಾಜು ಮಾಡಲಾಗುತ್ತಿದೆ. ಪ್ರಸ್ತುತ ಅವಧಿ ಅಕ್ಟೋಬರ್-2025 ರ ಅಂತ್ಯದವರೆಗೆ ಇರುತ್ತದೆ. |
| ಉ | "ಮನ್‌ಮುಲ್" ನಿಂದ ಹಾಲು ಮತ್ತು ತುಪ್ಪ ಹೊರತುಪಡಿಸಿ ಇತರ ರಾಜ್ಯಗಳಿಗೆ ಪೂರೈಸಲಾಗು ತ್ತಿರುವ ಉಪ ಉತ್ಪನ್ನಗಳು ಯಾವುವು; ಕಳೆದ ಮೂರು ವರ್ಷಗಳ ಉತ್ಪಾದನೆ ವಹಿವಾಟು ಮತ್ತು ಇವುಗಳ ಲಾಭವೆಷ್ಟು? (ಮಾಹಿತಿ ನೀಡುವುದು) | ಮನ್‌ಮುಲ್ ನಿಂದ ಹಾಲು ಮತ್ತು ತುಪ್ಪ ಹೊರತುಪಡಿಸಿ ಇತರೆ ರಾಜ್ಯಗಳಿಗೆ ಬೇರೆ ಯಾವುದೇ ಹಾಲಿನ ಉತ್ಪನ್ನಗಳನ್ನು ಪೂರೈಸುತ್ತಿರುವುದಿಲ್ಲ. |

**ಕಡತ ಸಂಖ್ಯೆ: ಸಿಒ 142 ಸಿಸಿಬಿ 2025**

(ಸಿದ್ದರಾಮಯ್ಯ)
ಮುಖ್ಯಮಂತ್ರಿ